ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯದಲ್ಲಿ,
ನ.ರಾ.ಪುರ.
ಸಿ.ಸಿ. ನಂ ಃ **90/2025**

| | | |
|---|---|---|
| ಸಾಕ್ಷಿದಾರರ ಹೆಸರು | ಃ ಇಂತಿಯಾಜ್ ಅಹ್ಮದ್ | ಸಿ.ಡಬ್ಲ್ಯೂ - 02 |
| ತಂದೆಯ ಹೆಸರು | ಃ ಮಹಮ್ಮದ್ ಜಾಫರ್ | ಪಿ.ಡಬ್ಲ್ಯೂ - 02 |
| ವಯಸ್ಸು | ಃ 36 ವರ್ಷ | |
| ಉದ್ಯೋಗ | ಃ ಕೂಲಿ | |
| ವಾಸಸ್ಥಳ | ಃ ಆನುವಟ್ಟಿ ತಿಮ್ಮಾಪುರ ಗ್ರಾಮ | |

ದಿನಾಂಕಃ **06/04/2026** ರಂದು ಪ್ರಮಾಣವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃಃ

1.ಚಾಸಾ 1 ರವರ ಪರಿಚಯ ಇರುತ್ತದೆ. ಚಾಸಾ 27 ರವರ ಪರಿಚಯವಿರುತ್ತದೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇರುತ್ತದೆ.

2. ನಾನು ಮತ್ತು ಚಾಸಾ 1 ರವರ ಬಾಲ್ಯ ಸ್ನೇಹಿತರು ಇದ್ದು, ನಾನು ಮತ್ತು ಚಾಸಾ 1 ರವರು ಯಾವಾಗಲು ಸಂಪರ್ಕದಲ್ಲಿ ಇದ್ದು, ಚಾಸಾ 1 ರವರ ತಂದೆ ಎನ್ ಆರ್ ಪುರ ತಾಲ್ಲೂಕು ಕುಸ್ಕೋಲ್ ಗ್ರಾಮದಲ್ಲಿ ಸುಮಾರು 8 ಎಕರೆ ಜಮೀನನ್ನು ಖರೀದಿ ಮಾಡಿದ್ದರು. ನಾನು ಆವಾಗಾವಾಗ ಚಾಸಾ 1 ರವರ ಜೊತೆ ಸದರಿ ಜಮೀನಿಗೆ ಹೋಗಿ ಬರುವುದು ಮಾಡುತ್ತಿದ್ದೇನು. ಸದರಿ ಚಾಸಾ 1 ರವರ ಜಮೀನು ಪಕ್ಕದಲ್ಲಿ ನಂದನ್ ಕುಮಾರ (2 ನೇ ಆರೋಪಿ) ರವರ ಜಮೀನು ಇದ್ದು, ಸಪ್ಟೆಂಬರ್ 2016 ರಲ್ಲಿ ಭರತ ಅವರು ನನಗೆ ಫೋನ್ ಮಾಡಿ ನಂದನ್ ಕುಮಾರ ಎನ್ನುವವರು ರೈಸ್ ಪುಲ್ಲಿಂಗ್ ವಸ್ತು ಇದ್ದು, ಸದರಿ ವ್ಯವಹಾರವನ್ನು ಮಾಡಿದರೆ ಕೊಟ್ಯಾನುಗಟ್ಟಲೆ ಲಾಭ ಮಾಡಬಹುದು ಎಂದು ತಿಳಿಸಿದ್ದು, ಸದರಿ ವಸ್ತು ಹೊಸದುರ್ಗದ ಮಠದಲ್ಲಿ ಇದೆ ಅಂತ ಹೇಳುತ್ತಿದ್ದಾನೆ. ಸದರಿ ವಿಚಾರದ ಬಗ್ಗೆ ನಿಮಗೆ ಗೊತ್ತಾ ಎಂದು ನನ್ನನ್ನು ಕೇಳಿದ್ದು, ನಾನು ಭರತ ಈತನಿಗೆ ರೈಸ್ ಪುಲ್ಲಿಂಗ್ ವ್ಯವಹಾರ ಮಾಡಿದರೆ ಕೊಟ್ಯಾನುಗಟ್ಟಲೇ ಲಾಭ ಇದೆ ಎಂದು ಯಾರೂ ಹೇಳಿದ್ದನ್ನು ಕೇಳಿದ್ದಾಗಿ ನಾನು ತಿಳಿಸಿದೆನು.

3. ನಂದನ್ ಕುಮಾರ ಇವರು ಈ ವ್ಯವಹಾರವನ್ನು ಮಾಡೋಣ ಎಂದು ಚಾಸಾ 1 ರವರು ತಮಗೆ ಹಿಂಸೆ ಮಾಡುತ್ತಿರುವುದಾಗಿ ನನಗೆ ಫೋನ್ ಮುಖಾಂತರ ತಿಳಿಸಿ ಎನ್ ಆರ್. ಪುರಕ್ಕೆ

ಬರುವಂತೆ ನನಗೆ ಹೇಳಿದ್ದು, ನಾನು, ಭರತ ಹಾಗೂ ನಂದನ್ ಕುಮಾರ ಎನ್ ಆರ್ ಪುರದಲ್ಲಿ ಭೇಟಿ ಆದಾಗ ಚಾಸಾ 1 ರವರ ಜಮೀನಿನ ಪಕ್ಕ ಇರುವ ನಂದನ್ ಕುಮಾರ ಇವರೇ ಎಂದು ನನಗೆ ಗೊತ್ತಾಗಿರುತ್ತದೆ. ಈ ವ್ಯವಹಾರ ಮಾಡಿದರೆ ಸಾಕಷ್ಟು ಹಣ ಮಾಡಬಹುದು ಈ ವ್ಯವಹಾರ ಗೊತ್ತಿರುವವರು/ಸಂಬಂಧಪಟ್ಟಿರುವವರು ಎನ್ ಆರ್ ಪುರಕ್ಕೆ ಬಂದಿರುತ್ತಾರೆ ಅವರನ್ನು ಭೇಟಿ ಮಾಡೋಣ ಎಂದು ನಂದನ್ ಇವರು ನಮಗೆ ತಿಳಿಸಿದರು. ನಂತರ ನಾವು ಬಸ್ಸಿಮಠದ ಹತ್ತಿರ ವಿಜಯ ಕುಮಾರ ಇವರು ನಮ್ಮ ಜೊತೆ ಭೇಟಿ ಆಗಿ ರೈಸ್ ಪುಲ್ ವ್ಯವಹಾರ ಮಾಡಿದರೆ ತುಂಬಾ ಲಾಭ ಇದೆ ಆ ವಸ್ತು ಹೊಸದರ್ಗದ ಮಠದಲ್ಲಿ ಇದೆ ಎಂದು ವಿಜಯ್ ಕುಮಾರ್ ತಿಳಿಸಿದರು. ಹಾಗೂ ನನ್ನ ಮೇಲೆ ನಂಬಿಕೆ ಇಲ್ಲದೇ ಇದ್ದರೆ ಹೊಸದುರ್ಗದ ಮಠಕ್ಕೆ ಹೋಗೋಣ ತೋರಿಸುತ್ತೇನೆ ಎಂದು ಹೇಳಿದರು.

4. 2-3 ದಿನಗಳ ನಂತರ ಭರತ್ ನನಗೆ ಕರೆ ಮಾಡಿ ಹೊಸದುರ್ಗಕ್ಕೆ ಹೋಗಿ ಸ್ವಾಮೀಜಿಯವರನ್ನು ಭೇಟಿ ಆಗೋಣ ಎಂದು ತಿಳಿಸಿದನು. ಆಗ ನಾನು, ಭರತ್, ನಂದನ್ ಕುಮಾರ್ ಮತ್ತು ವಿಜಯ್ ಕುಮಾರ್ ಇವರು ಸೇರಿಕೊಂಡು ನಂದನ್ ಕುಮಾರ್ ಗೆ ಸಂಬಂಧಿಸಿದ ಬಿಳಿ ಬಣ್ಣದ ಸ್ವಿಫ್ಟ್ ಕಾರಿನಲ್ಲಿ ಹೊಸದುರ್ಗಕ್ಕೆ ಹೋದೆವು. ನಾವು ಇಲ್ಲಿಂದ ಹೊಸದುರ್ಗದ ಸದ್ಗುರು ಸೇವಾಶ್ರಮ ಕ್ಕೆ ಹೋಗಿ ಅಲ್ಲಿ ಒಬ್ಬ ಸ್ವಾಮೀಜಿಯವರನ್ನು ಭೇಟಿ ಯಾಗುತ್ತೇವೆ. ಸ್ವಾಮೀಜಿಯವರು ನಮಗೆ ರೈಸ್ ಪುಲ್ಲಿಂಗ್ ವ್ಯವಹಾರ ಮಾಡುವುದರಿಂದ ತುಂಬಾ ಲಾಭ ಇದೆ ನೀವು ನಿಮ್ಮ ಹೆಸರು ಜಾತಕ ಎಲ್ಲಾ ಕೊಡಬೇಕು, ದೇವರು ಅಪ್ಪಣೆ ಕೊಟ್ಟರೆ ಮಾತ್ರ ಈ ವ್ಯವಹಾರ ಮಾಡಬೇಕು ಎಂದು ಸ್ವಾಮೀಜಿ ಹೇಳಿ ಕಳುಹಿಸಿರುತ್ತಾರೆ. ನಾವು ಅಲ್ಲಿಂದ ಹೊರಗಡೆ ಬರುವಾಗ ನಂದನ್ ಮತ್ತು ವಿಜಯ್ ಕುಮಾರ್ ಹೊರಗೆ ಬಂದು ಫೋನ್ ಮಾಡಿ ಈ ವ್ಯವಹಾರ ಮಾಡಿದರೆ ಸಾಕಷ್ಟು ಲಾಭ ಇರುತ್ತದೆ ಹಾಗೂ ಈ ವ್ಯವಹಾರ ಮಾಡಲು ನಾವು 4 ಜನ ಸೇರಿ 45 ಲಕ್ಷ ಹಣ ತೊಡಗಿಸೋಣ ಎಂದು ಹೇಳಿದ್ದು ನಾನು ಮತ್ತು ಭರತ್ ಒಪ್ಪಿರಲಿಲ್ಲ. ಸದರಿ ಹಣವನ್ನು ಕಂಪನಿಗೆ ಕೊಡಬೇಕು ಹಾಗೂ ಸದರಿ ಯವರು ಟೆಸ್ಟ್ ಪಾಸಾಗದೇ ಇದ್ದರೆ ನಾವು ಕಟ್ಟಿದ ಹಣವನ್ನು ವಾಪಸ್ಸು ಕೊಡುತ್ತಾರೆ ಎಂದು ಹೇಳಿದ್ದು ನಾವು ಒಪ್ಪಿರುವುದಿಲ್ಲ.

5. ನಂತರ ನಾವು ಅಲ್ಲಿಂದ ಊರಿಗೆ ವಾಪಸ್ಸು ಬಂದಿರುತ್ತೇವೆ. ನಂತರ ನಾವು 4 ಜನ ಸೇರಿದಾಗ ವಿಜಯ್ ಕುಮಾರ್ ಇವರು ನಾವು 4 ಜನ ಹಣ ಹಾಕೋಣ ಎಂದು ಹೇಳಿದ್ದು, ನಾವು

ಒಪ್ಪದೇ ಇದ್ದಾಗ ತಲಾ 4 ಜನ ಹತ್ತತ್ತು ಲಕ್ಷದಂತೆ ಹಣ ಹಾಕೋಣ ಎಂದು ಹೇಳಿದ್ದು, ಆಗ ನಂದನ ಇವರು ತಮ್ಮ ಬಳಿ ಹಣ ಇಲ್ಲ ಎಂದು ಹಿಂದೆ ಸರಿದಿರುತ್ತಾರೆ. ಸದರಿ ರೈಸ್ ಪುಲ್ಲಿಂಗ್ ವ್ಯವಹಾರಕ್ಕೆ ಸಂಬಂಧಪಟ್ಟ ಕಂಪನಿಯ ಪರಿಚಯ ತಮಗೆ ಇರುವುದಾಗಿ ನಂದನ್ ಮತ್ತು ವಿಜಯ್ ಕುಮಾರ್ ರವರು ತಿಳಿಸಿರುತ್ತಾರೆ. ಆಗ ನಾವು ವಿಚಾರ ಮಾಡೋಣ ಎಂದು ಹೇಳಿ ಹೋಗಿರುತ್ತೇವೆ. ನಂತರ ನನಗೆ ಭರತ ಪೋನ್ ಮಾಡಿ ದೊಡ್ಡ ಸ್ವಾಮೀಜಿಯವರು ದೇವರು ನನ್ನ ಹೆಸರಿನಲ್ಲಿ ಅಪ್ಪಣೆ ಕೊಟ್ಟಿರುತ್ತಾರೆ ಎಂದು ಹೇಳಿದ್ದು, ಅಲ್ಲಿಂದ ನಂತರ ತಮ್ಮ ಕಂಪನಿ ಬೆಂಗಳೂರಿನಲ್ಲಿ ಇದೆ ಎಂದು ಹೇಳಿದ ಮೇರೆಗೆ ನಾನು, ಭರತ್, ನಂದನ್ ಹಾಗೂ ವಿಜಯ ಕುಮಾರ್ ರವರು ಬೆಂಗಳೂರಿನ ಐ.ಟಿ.ಸಿ ಇಂಟರ್ ನ್ಯಾಷನಲ್ ಹೋಟೆಲ್ ಹೋಗಿದ್ದು, ಆಗ ಸದರಿ ಕಂಪನಿಯ ಪ್ರತಿನಿಧಿಯಾದ ಮಹಮ್ಮದ್ ರಫಿ ಇವರನ್ನು ಚೇತನ್ ಮತ್ತು ನಂದನ್ ಪರಿಚಯ ಮಾಡಿಸಿರುತ್ತಾರೆ. ಮಹಮ್ಮದ್ ರಫಿ ಇವರು ರೈಸ್ ಪುಲ್ಲಿಂಗ್ ವಸ್ತು ಕೊಟಿಗಟ್ಟಲೆ ಬೆಳೆಬಾಳುವ ವಸ್ತು ಇದ್ದು ಅದನ್ನು ಪರಿಕ್ಷೇ ಮಾಡಲು ಸುಮಾರು 45 ಲಕ್ಷ ಹಣ ಖರ್ಚಾಗುತ್ತದೆ ಅದನ್ನು ಕಂಪನಿಗೆ ಕಟ್ಟಬೇಕು ಎಂದು ತಿಳಿಸಿದರು. ನಾವು ಸದರಿ ವಸ್ತುವಿಗೆ ನಿಜವಾದ ಬೆಲೆಯನ್ನು ಕಂಪನಿ ಕಡೆಯಿಂದ ಹಾಗೂ ಸರ್ಕಾರದಿಂದ ಕೊಡಿಸುತ್ತೇವೆ ನಿಮಗೆ ಹೊರದೇಶದಲ್ಲಿ ಕಾರು, ಬಂಗಲೆ ಕೊಡಿಸುವುದಾಗಿ ಹೇಳಿ ತಿಳಿಸಿರುತ್ತಾರೆ.

6. ನಂತರ ಭರತ್ ಇವರು ದೊಡ್ಡ ಸ್ವಾಮೀಜಿ ಅಂತ ಇದ್ದ ರಾಜೇಶ ಎನ್ನುವವರಿಗೆ ಪೋನ್ ಮಾಡಿ 45 ಲಕ್ಷ ಹಣ ಕಟ್ಟುವ ಬಗ್ಗೆ ಕೇಳುತ್ತಿದ್ದಾರೆ ಎಂದು ಹೇಳಿದ್ದಕ್ಕೆ ಸದರಿ ಸ್ವಾಮೀಜಿ ನೀವು ಹಣ ಕಟ್ಟಿ ನಾವು ಸಣ್ಣ ಸ್ವಾಮೀಜಿಗೆ ಹೇಳುತ್ತೇವೆ ಎಂದು ತಿಳಿಸಿದರು. ನಂತರ ಊರಿಗೆ ಬಂದು ಭರತ್ ಇವರು 24 ಲಕ್ಷ ಹಣ ಹಾಗೂ ನಾನು 6 ಲಕ್ಷ ಹಣ ಕೊಡುವುದಾಗಿ ನಾನು 6 ಲಕ್ಷ ಹಣದಲ್ಲಿ ಒಂದುವರೆ ಲಕ್ಷ ನನ್ನ ಅಣ್ಣನಿಂದ ಮತ್ತು ನಾಲ್ಕುವರೆ ಲಕ್ಷ ಹಣ ನನ್ನ ಬಳಿ ಇದ್ದು, ಹಾಗೂ 15 ಲಕ್ಷ ಹಣವನ್ನು ವಿಜಯ್ ಕುಮಾರ್ ಇವರು ಕೊಡುತ್ತೇನೆ ಎಂದು ಹೇಳಿರುತ್ತಾರೆ. ಅಕ್ಟೋಬರ್ 2016 ರ ಕೊನೆಯ ವಾರದಲ್ಲಿ ಬೆಂಗಳೂರಿನ ಲಲಿತ್ ಅಶೋಕ್ ಹೋಟೇಲ್ ಗೆ ಹೋಗಿದ್ದು ಅಲ್ಲಿ ಕಂಪನಿಯ ಪ್ರತಿನಿಧಿಯಾದ ಮಹಮ್ಮದ್ ರಫಿ ಇವರಿಗೆ ನಾವು ತೆಗೆದುಕೊಂಡು ಹೋಗಿದ್ದ 30 ಲಕ್ಷ ಹಣವನ್ನು ನಾನು ಮತ್ತು ಭರತ್ ಕೊಟ್ಟಿದ್ದು, 15 ಲಕ್ಷ ಹಣವನ್ನು ವಿಜಯ್ ಕುಮಾರ್ ಈಗಾಗಲೇ ಕೊಟ್ಟಿರುವುದಾಗಿ ತಿಳಿಸಿರುತ್ತಾರೆ. ನಂತರ ನಾವು ಅಲ್ಲಿಂದ ವಾಪಸ್ಸು

ಬಂದಿರುತ್ತೇವೆ. 3 ದಿನಗಳ ನಂತರ ಮಹಮ್ಮದ್ ರಫಿ ಮತ್ತು ಅವರ ಸಹಚರರು ಫಾರ್ಚುನರ್ ಕಾರಿನಲ್ಲಿ ಹೊಸದುರ್ಗಕ್ಕೆ ಬಂದಿರುತ್ತಾರೆ. ಸದರಿಯವರು ಕಾಲಿ ಬಾಂಡ್ ಪೇಪರ್ ಗಳಿಗೆ ಸಹಿ ಮಾಡುವಂತೆ ಭರತ್ ಈತನ ಬಳಿ ಬಂದಿದ್ದು ಆತನು ನಾನು ಖಾಲಿ ಪೇಪರ್ ಗೆ ಸಹಿ ಮಾಡುವುದಿಲ್ಲ ಎಂದು ಹೇಳಿದ್ದು ಆಗ ಅವರು ನೀವು ಕೊಟ್ಟ ಹಣವನ್ನು ವಾಪಸ್ಸು ಕೊಡುವುದಿಲ್ಲ ಹಾಗೂ ವಸ್ತುವನ್ನು ಸಹ ಪರಿಕ್ಷೇ ಮಾಡುವುದಿಲ್ಲ ಎಂದು ಹೇಳಿದ್ದು, ಆ ಕಾಲಕ್ಕೆ ಸಣ್ಣ ಸ್ವಾಮೀಜಿ ಎಂದು ಕಾರಿನಲ್ಲಿ ಒಬ್ಬ ವ್ಯಕ್ತಿ ಕುಂತಿರುತ್ತಾರೆ.

7. ನಂತರ ಭರತ್ ಈತನು ಖಾಲಿ ಪೇಪರ್ ಗಳನ್ನು ಸಣ್ಣ ಸ್ವಾಮೀಜಿ ಹತ್ತಿರ ತೆಗೆದುಕೊಂಡು ಹೋಗಿ ಸಹಿ ಮಾಡುವುದಿಲ್ಲ ಎಂದು ಹೇಳಿದ್ದು, ಆಗ ಸ್ವಾಮೀಜಿಯವರು ನಿಮ್ಮ ಹೆಸರಿನಲ್ಲಿ ದೇವರ ಅಪ್ಪಣೆ ಆಗಿದೆ ಹಾಗಾಗಿ ಸಹಿ ಮಾಡುವಂತೆ ತಿಳಿಸಿರುತ್ತಾರೆ. ನಂತರ ಭರತ ಕಡೆಯಿಂದ ಸಹಿ ಪಡೆದು ನನ್ನನ್ನು ಮತ್ತು ಭರತ್ ನನ್ನು ಅಲ್ಲಿಯೇ ಬಿಟ್ಟು ವಸ್ತು ವನ್ನು ಪರೀಕ್ಷೆ ಮಾಡುವುದಾಗಿ ಹೋಗಿರುತ್ತಾರೆ. ನಂತರ ಭರತ ಇವರಿಗೆ ರಾಜೇಶ್ (ದೊಡ್ಡ ಸ್ವಾಮೀಜಿ)ಫೋನ್ ಮಾಡಿ ವಸ್ತು ತುಂಬಾ ಸ್ಟ್ರಾಂಗ್ ಇದೆ ಸದರಿ ವಸ್ತು ಪರೀಕ್ಷೆ ಮಾಡಲು ಚಿಕ್ಕ ಜಾಕೇಟ್ ತಂದಿರುತ್ತಾರೆ ದೊಡ್ಡ ಜಾಕೇಟ್ ತರಬೇಕಿತ್ತು ಎಂದು ತಿಳಿಸಿರುತ್ತಾರೆ. ನಂತರ ಪರೀಕ್ಷೆ ಮಾಡಲು ಹೋದ ರಫಿಕ್ ರವರು ನಾವು ಇದ್ದ ಸ್ಥಳಕ್ಕೆ ವಾಪಸ್ಸು ಬಂದಿರುತ್ತಾರೆ. ಸದರಿ ಯವರು ನಮ್ಮ ಹತ್ತಿರ ಬಂದು ಇಂತಹ ವಸ್ತು ನಾವು ಎಲ್ಲಿಯೂ ನೋಡಿರುವುದಿಲ್ಲ ಇದು ತುಂಬಾ ಸ್ಟ್ರಾಂಗ್ ಇದೆ ಎಂದು ಹೇಳಿ ನಮ್ಮನ್ನು ನಂಬಿಸಿರುತ್ತಾರೆ. ಸದರಿ ವಸ್ತುವನ್ನು ಪರೀಕ್ಷೆ ಮಾಡಲು ದೊಡ್ಡ ಜಾಕೆಟ್ ಬೇಕಾಗುತ್ತದೆ ಹಾಗೂ ಎಷ್ಟು ಆಗುತ್ತದೆ ಎಂಬ ಬಗ್ಗೆ ನಮ್ಮ ಎಂ.ಡಿ.ಯವರನ್ನು ಕೇಳಿ ಹೇಳುತ್ತೇನೆ ಎಂದು ಬೆಂಗಳೂರಿಗೆ ಹೊರಟುಹೋಗಿರುತ್ತಾರೆ.

8. ಕೆಲ ದಿನಗಳ ನಂತರ ವಿಜಯ್ ಕುಮಾರ್ ರವರು ಭರತ್ ಗೆ ಫೋನ್ ಮಾಡಿ ಜಾಕೆಟ್ ಖರೀದಿಸಲು ರೂ. 1 ಕೋಟಿ 10 ಲಕ್ಷ ಹಣ ಕಟ್ಟಬೇಕು ಎಂದು ಹೇಳಿದ್ದು, ಆಗ ಭರತ್ ಅದನ್ನು ನಿರಾಕರಿಸಿರುತ್ತಾರೆ. ಆಗ ನಾವು ಅಷ್ಟು ಹಣ ಕಟ್ಟಲು ಆಗುವುದಿಲ್ಲ ಎಂದು ಹೇಳಿದ್ದು, ಆಗ ಮಹಮ್ಮದ್ ರಫಿಕ್ ಮತ್ತು ವಿಜಯ್ ಕುವಾರ್ ತಲಾ ಅರ್ಧರ್ಧ ಹಣ ಹಾಕುವುದಾಗಿ ಹೇಳಿದ್ದು ನಾವು ಕಟ್ಟಿದ ಹಣ ವಾಪಸ್ಸು ಬರುವುದಿಲ್ಲ ಎಂದು ಗೊತ್ತಾದ ನಂತರ ಭರತ್ ಈತನು ರೂ. 50 ಲಕ್ಷದ 50 ಸಾವಿರ ಹಣವನ್ನು ಹೊಂದಿಸಿ ನಮ್ಮ ಅಣ್ಣ ತುರ್ವೆ ಕೆರೆಯಲ್ಲಿ ಇದ್ದು ಆತನ ಕಡೆಯಿಂದ

ಭರತ್ ಈತನು ನನ್ನ ಪರವಾಗಿ 50 ಸಾವಿರ ಹಣವನ್ನು ಪಡೆದುಕೊಂಡು ಬಂದಿರುತ್ತಾನೆ. ನಂತರ ನಾವು ರೂ. 51 ಲಕ್ಷ ಹಣವನ್ನು ಜೋಡಿಸಿಕೊಂಡು ಬೆಂಗಳೂರಿನ ಗ್ರ್ಯಾಂಡ್ ಅಶೋಕ ಹೋಟೆಲ್ ಗೆ ಹೋಗಿರುತ್ತೇವೆ. ನಾವು ಹಣದ ಬ್ಯಾಗ್ ಅನ್ನು ತೆಗೆದುಕೊಂಡು ಹೋಟೆಲ್ ಒಳಗೆ ಹೋಗುವಾಗ ಪ್ರವೇಶ ದ್ವಾರದಲ್ಲಿ ಸದರಿ ಬ್ಯಾಗ್ ಅನ್ನು ಚೆಕ್ ಮಾಡುವಾಗ ರಫೀಕ್ ಮತ್ತು ಅವರ ಸಹಚರರು ಬಂದು ಇವರು ನಮ್ಮವರೇ ಎಂದು ಹೇಳಿ ನಮ್ಮನ್ನು ರೂಮ್ ಗೆ ಕರೆದುಕೊಂಡು ಹೋಗಿರುತ್ತಾರೆ. ಹಾಗೂ ನಾವು ಕೊಟ್ಟ ಹಣವನ್ನು ಎಣಿಸಿಕೊಂಡಿರುತ್ತಾರೆ ನಮ್ಮ ಸಮಕ್ಷಮ ವಿಜಯ್ ಕುವಾರ್ ಇವರು ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ.

9. ನಂತರ ನಾವು ಬೆಂಗಳೂರಿನಿಂದ ಊರಿಗೆ ವಾಪಸ್ಸು ಬಂದಿರುತ್ತೇವೆ. ಕೆಲವು ದಿನಗಳ ನಂತರ ಪುನಃ ಅವರು ಫಾರ್ಚುನರ್ ಕಾರಿನಲ್ಲಿ ವಸ್ತುವನ್ನು ಪರೀಕ್ಷೆ ಮಾಡಲು ಹೊಸದುರ್ಗಕ್ಕೆ ಬಂದಿದ್ದು ನಾವು ಸಹ ರಾಮ್ಕೋ ಸಿಮೆಂಟ್ ಗೇಟ್ ಬಳಿ ಹೋಗಿರುತ್ತೇವೆ. ನಂತರ ಅವರು ತಂದಿದ್ದ ಕಾಗದಪತ್ರಗಳಿಗೆ ಭರತ್ ಈತನ ಕಡೆಯಿಂದ ಸಹಿ ಪಡೆದು ನಮ್ಮನ್ನು ಅಲ್ಲಿಯೇ ಬಿಟ್ಟು ವಸ್ತುವನ್ನು ಪರೀಕ್ಷೆ ಮಾಡಲು ಹೋಗುವುದಾಗಿ ಹೇಳಿರುತ್ತಾರೆ. ನಂತರ ರಾಜೇಶ್ (ದೊಡ್ಡ ಸ್ವಾಮೀಜಿ) ಭರತ್ ಈತನಿಗೆ ಪೋನ್ ಮಾಡಿ ಪರೀಕ್ಷೆ ಮಾಡಿದ ವಸ್ತು ಟೆಸ್ಟ್ ನಲ್ಲಿ ಪಾಸಾಗಿದೆ, ಅದನ್ನು ಪ್ಯಾಕ್ ಮಾಡಿ ಇಟ್ಟಿರುತ್ತೇವೆ. ಸದರಿ ಸಣ್ಣ ಸ್ವಾಮೀಜಿಯಾದ ಕೃಷ್ಣಪ್ಪ ಇವರು ಅದನ್ನು ಕೊಡಲು 10 ಕೋಟಿ ಕೇಳುತ್ತಿದ್ದಾರೆ ಹಾಗೂ ಇದು ರೈತರಿಗೆ ಸಂಬಂಧಪಟ್ಟಿದ್ದು ಎಂದು ತಿಳಿಸಿರುತ್ತಾರೆ. ನಂತರ ರಫೀಕ್ ಮತ್ತು ಅವರ ಸಹಚರರು ಕಾರನ್ನು ತೆಗೆದುಕೊಂಡು ಬಂದು ನಾವು ಇದ್ದ ಸ್ಥಳಕ್ಕೆ ಬಂದಿರುತ್ತಾರೆ. ನಾವು ರಫೀಕ್ ಇವರಿಗೆ ಅಷ್ಟು ಹಣ ಕೊಡಲು ಆಗುವುದಿಲ್ಲ ಎಂದು ಹೇಳಿದ್ದಕ್ಕೆ ಅವರು ನೀವು ಮೊದಲು ದುಡ್ಡು ಕೊಡಿ ನಾವು ಆಮೇಲೆ ವಸ್ತು ಕೊಡುತ್ತೇವೆ ಎಂದು ಹೇಳಿರುತ್ತಾರೆ. ಆಗ ಸಣ್ಣ ಸ್ವಾಮೀಜಿಯವರನ್ನು ಭರತ್ ಈತನು ಕರೆದುಕೊಂಡು ಬಂದು ನಂತರ ಹಣ ಕೊಡುತ್ತೇನೆ ಎಂದು ಹೇಳಿದರು ಸಹ ಅವರು ಒಪ್ಪಿರುವುದಿಲ್ಲ. ನಂತರ ಭರತ್ ಈತನು ರಾಜೇಶ್ (ದೊಡ್ಡ ಸ್ವಾಮೀಜಿ) ಯವರಿಗೆ ಪೋನ್ ಮಾಡಿ ವಿಚಾರ ತಿಳಿಸಿದಾಗ ನೀವು ಬಸ್ ಸ್ಟ್ಯಾಂಡ್ ಕಡೆಗೆ ಹೋಗಿ ನಾವು ನಿಮಗೆ ವಿಚಾರ ತಿಳಿಸುತ್ತೇನೆ ಎಂದು ಹೇಳಿದ್ದು, ಸ್ವಲ್ಪ ಸಮಯದ ನಂತರ ದೊಡ್ಡ ಸ್ವಾಮೀಜಿ ಪೋನ್ ಮಾಡಿ ನಾವು ಹೇಳಿದರು ಸಹ ಒಪ್ಪುತ್ತಿಲ್ಲ ನೀವು ಊರಿಗೆ ಹೋಗಿ ನಾವು ಹೇಳಿ ಕಳುಹಿಸುತ್ತೇನೆ ಎಂದು ತಿಳಿಸಿರುತ್ತಾರೆ.

10. ನವೆಂಬರ್ 2016 ರಲ್ಲಿ ಸ್ವಾಮೀಜಿಗೆ ರಾಜೇಶನು ಪೋನ ಮಾಡಿದಾಗ ಈಗ ನೋಟ್ ಬ್ಯಾನ್ ಆಗಿದೆ ಹಣ ಹೊಂದಿಸುವುದು ಕಷ್ಟ ಆಗುತ್ತದೆ ಎಂದು ಭರತನು ನನಗೆ ಪೋನ್ ಮಾಡಿರುವುದಾಗಿ ಹೇಳಿರುತ್ತಾನೆ. ಸ್ವಲ್ಪ ದಿನದ ನಂತರ ಭರತ್ ಈತನು ನನಗೆ ಪೋನ್ ಮಾಡಿ ಸ್ವಾಮೀಜಿಯವರು ಸರಿ ಮಾಡಿರುತ್ತಾರೆ. ಸ್ವಲ್ಪ ಸಮಯ ಬೇಕು ಎಂದು ಕೇಳಿರುತ್ತಾರೆ ಎಂದು ಹೇಳಿರುತ್ತಾರೆ. ಆಗ ರಫೀಕ್ ಇವರಿಗೆ ಪೋನ್ ಮಾಡಿ ಸ್ವಾಮೀಜಿಯವರು ಎಲ್ಲಾ ಬಗೆಹರಿಸಿರುತ್ತಾರೆ ನೀವು ಸ್ಥಳಕ್ಕೆ ಬನ್ನಿ ಎಂದು ಕೇಳಿದಾಗ ಅವರು ಸುಮ್ಮನೆ ಬರಲು ಆಗುವುದಿಲ್ಲ ರೈಸ್ ಪುಲ್ಲಿಂಗ್ ಟೆಸ್ಟ್ ಮಾಡಲು 45 ಲಕ್ಷ ಹಣ ಕಟ್ಟಬೇಕು ಎಂದು ತಿಳಿಸಿರುತ್ತಾರೆ. ನಂತರ ಡಿಸೆಂಬರ್ 2019 ರಲ್ಲಿ ನಾನು, ಭರತ್ ಹಾಗೂ ಅವರ ತಂದೆ 20 ಲಕ್ಷ ಹಣ ತೆಗೆದುಕೊಂಡು ಬೆಂಗಳೂರಿನ ಗ್ರ್ಯಾಂಡ್ ಅಶೋಕ್ ಹೋಟೆಲಿಗೆ ಹೋಗಿರುತ್ತೇವೆ. ನಂತರ ನಾವು ಸದರಿ ಹಣವನ್ನು ರಫೀಕ್ ಇವರಿಗೆ ಕೊಟ್ಟು ಊರಿಗೆ ವಾಪಸ್ಸು ಬಂದಿರುತ್ತೇವೆ. ನಾವು ಹಣ ಕೊಟ್ಟ ವಿಚಾರವನ್ನು ದೊಡ್ಡ ಸ್ವಾಮೀಜಿ ಇವರಿಗೆ ತಿಳಿಸಿರುತ್ತೇವೆ. ನಂತರ ರಫೀಕ್ ಇವರು 2-3 ದಿನಗಳ ನಂತರ ಸದರಿ ವಸ್ತುವನ್ನು ಪರೀಕ್ಷೆ ಮಾಡಲು ಬಂದಿರುತ್ತಾರೆ. ಆ ಕಾಲಕ್ಕೆ ನಾನು, ಭರತ್, ಭರತ್ ನ ತಂದೆ ಹಾಗೂ ವಿಜಯ್ ಕುಮಾರ್ ಇಲ್ಲಿಂದ ಹೋಗಿರುತ್ತೇವೆ. ನಮ್ಮನ್ನು ಅಲ್ಲಿಯೇ ನಿಲ್ಲಿಸಿ ಭರತ್ ನ ಕಡೆಯಿಂದ ಚಾಪಾ ಕಾಗದಗಳಿಗೆ ಸಹಿ ಪಡೆದುಕೊಂಡಿರುತ್ತಾರೆ. ನಂತರ ಭರತ್ ನನ್ನು ಫಾರ್ಚುನರ್ ಕಾರಿನಲ್ಲಿ ವಸ್ತು ಪರೀಕ್ಷೆ ಮಾಡುವ ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತಾರೆ. ನಮ್ಮನ್ನು ಅಲ್ಲಿಯೇ ಬಿಟ್ಟು ಹೋಗಿರುತ್ತಾರೆ. ನಂತರ ಸ್ವಲ್ಪ ಸಮಯದ ನಂತರ ಭರತ್ ಈತನು ನನಗೆ ಪೋನ್ ಮಾಡಿ ಇಲ್ಲಿ ಗಲಾಟೆ ಆಗುತ್ತಿದೆ ನನಗೆ ಹೊಡೆದಿರುತ್ತಾರೆ ಹಾಗೂ ಕಾರಿನ ಗ್ಲಾಸ್ ಅನ್ನು ಒಡೆದಿರುತ್ತಾರೆ ಎಂಬ ವಿಚಾರವನ್ನು ನನಗೆ ತಿಳಿಸಿ ಅಲ್ಲಿಂದ ಸ್ವಲ್ಪ ಮುಂದೆ ಹೋಗುವಂತೆ ಹೇಳಿರುತ್ತಾರೆ.

11. ನಾವು ಸ್ವಲ್ಪ ಮುಂದೆ ಹೋದ ನಂತರ ವುಳಿಯಾರು ರಸ್ತೆಯಲ್ಲಿ ನಿಂತಿದ್ದಾಗ ಭರತ್ ಈತನನ್ನು ಕಾರಿನಿಂದ ಇಳಿಸಿದಾಗ ಭರತ್ ಈತನು ಬಲಗೈ ಗೆ ಪೆಟ್ಟಾಗಿದ್ದು ಆತನು ಗಾಬರಿಯಿಂದ ಇದ್ದನು. ಆಗ ರಫೀಕ್ ಇವರು ಈ ಜಾಗದಿಂದ ಮೊದಲು ಹೋಗಿ ಎಂದು ನಮ್ಮನ್ನು ಅಲ್ಲಿಯೇ ಬಿಟ್ಟು ಅವರು ಹೋಗಿರುತ್ತಾರೆ. ನಮಗೆ ಸ್ವಾಮೀಜಿಯವರಿಗೆ ಹೇಳಿ ನಾವೆಲ್ಲರೂ ಸೇರಿ ಹಣವನ್ನು ಹಾಕಿ ಎಂದು ಹೇಳಿ ನಮ್ಮನ್ನು ನಂಬಿಸಿರುತ್ತಾರೆ. ದಿನಾಂಕ: 14.04.2019 ರಂದು ನಾನು

ಫಾರ್ಚುನರ್ ಕಾರನ್ನು ಎನ್.ಆರ್.ಪುರ ಪೋಲಿಸ್ ಠಾಣಾ ಆವರಣದಲ್ಲಿ ನೋಡಿ ಗುರುತಿಸಿದ್ದು ಸದರಿ ಕಾರ್ ಸಂಖ್ಯೆ: ಕೆ.ಎ.51 ಎಂ. 1040 ಇದ್ದು, ಸದರಿ ಕಾರನ್ನು ಈ ಕೃತ್ಯ ಸಂಬಂಧ ಬಳಸಿದ ಕಾರು ಇರುತ್ತದೆ ಎಂದು ಗುರುತಿಸಿ ನಾನು ನನ್ನ ಹೇಳಿಕೆಯನ್ನು ಕೊಟ್ಟಿರುತ್ತೇನೆ.

12. ಸಾಕ್ಷಿಯು ಫಾರ್ಚುನರ್ ಕಾರಿನ ಫೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-16 ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. (ಆರೋಪಿ 3 ಮತ್ತು 4 ರವರು ಗೈರು ಹಾಜರಿದ್ದು ಅವರ ಗುರುತಿಸುವಿಕೆಯ ಬಗ್ಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ಹೇಳಿರುತ್ತಾರೆ).

(ಪಾಟೀ ಸವಾಲು ಆರೋಪಿ ಪರ ವಕೀಲರು ಸಮಯ ಕೋರಿದ್ದು ಸಮಯ ನೀಡಲಾಯ್ತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು: ನ.ರಾ.ಪುರ.

ಸಾಕ್ಷಿದಾರರ ಸಹಿ: